ಅ) ಈ ಬಗ್ಗೆ ಸರ್ಕಾರವು ಯಾವುದೇ ನಿರ್ದೇಶನ ನೀಡಿರುವುದಿಲ್ಲ. ದಿನಾಂಕ 27-4-1978ರಿಂದ 24-10-1980ರವರೆಗೆ ಹಾಗೂ ದಿನಾಂಕ: 25-10-1980ರಿಂದ ದಿನಾಂಕ: 30-4-1980ರವರೆಗೆ ನಡೆದಿರುವ ಒತ್ತುವರಿ ಪ್ರಕರಣ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ್ದು, ಕೇಂದ್ರ ಸರ್ಕಾರವು ಸದರಿ ಪ್ರಸ್ತಾವನೆಯನ್ನು ತಿರಸ್ಕರಿಸಿದೆ.

ರಾಜ್ಯದಲ್ಲಿ ಹೊಸ ಪಶುವೈದ್ಯ ಆಸ್ಪತ್ರೆಗಳನ್ನು ತೆರೆಯುವುದು.

2227 (2749) ಶ್ರೀ ಕರಿಯಣ್ಣ (ಹೊಳೆಹೊನ್ನೂರು) :— ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) ರಾಜ್ಯದಲ್ಲಿ ಕಳೆದ ವರ್ಷ ಮತ್ತು ಪ್ರಸ್ತುತ ವರ್ಷದಲ್ಲಿ ಹೊಸ ಪಶುವೈದ್ಯ ಆಸ್ಪತ್ರೆಗಳನ್ನು ತೆರೆಯಲಾಗಿದೆ; (ವಿವರ ನೀಡುವುದು)

2) ಹೊಸ ಆಸ್ಪತ್ರೆಗಳನ್ನು ತೆರೆಯದಿದ್ದರೆ ಜಾನುವಾರುಗಳ ರೋಗ ತಪಾಸಣೆಗೆ ಗ್ರಾಮಾಂತರ ಪ್ರದೇಶಗಳಲ್ಲಿ ತೊಂದರೆಯಾಗುವುದಿಲ್ಲವೇ? (ವಿವರ ನೀಡುವುದು)

ಶ್ರೀ ಎ. ಕೃಷ್ಣಪ್ಪ (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು) :—

1) ಇಲ್ಲ.

2) ಇಲ್ಲ. ಗ್ರಾಮೀಣ ಪ್ರದೇಶಗಳಲ್ಲಿನ ಜಾನುವಾರುಗಳ ರೋಗ ತಪಾಸಣೆ ಬಗ್ಗೆ ಈಗಾಗಲೇ ಇರುವ ಸಂಸ್ಥೆಗಳಲ್ಲಿನ ಪಶುವೈದ್ಯ ನಿಗಾ ವಹಿಸುತ್ತಿರುವುದು.

ಜೋಗ್ ಅನ್ನು ಅಂತರ ರಾಷ್ಟ್ರೀಯ ಪ್ರವಾಸಿತಾಣವನ್ನಾಗಿ ಅಭಿವೃದ್ಧಿಪಡಿಸಲು ಕೇಂದ್ರದಿಂದ ಬಂದ ಹಣ.

2229 (2726) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) :— ಮಾನ್ಯ ಪ್ರವಾಸ್ಯೋದ್ಯಮ ಹಾಗೂ ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಜೋಗ್ ಅನ್ನು ಅಂತರ್ ರಾಷ್ಟ್ರೀಯ ಪ್ರವಾಸಿ ತಾಣವನ್ನಾಗಿ ಅಭಿವೃದ್ಧಿಗೊಳಿಸಲು ಯೋಜನಾ ವರದಿ ಸಿದ್ಧಪಡಿಸಲು ಕೇಂದ್ರ ಸರ್ಕಾರ ರೂ 5.00 ಲಕ್ಷಗಳನ್ನು ನೀಡಿರುವುದು ನಿಜವಲ್ಲವೇ?

ಆ) ಹಾಗಿದ್ದಲ್ಲಿ ರಾಜ್ಯ ಸರ್ಕಾರ ಯೋಜನಾ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದೆಯೇ;

ಇ) ಇಲ್ಲದಿದ್ದಲ್ಲಿ ಕಾರಣಗಳೇನು.

ಶ್ರೀ ಆರ್. ರೋಷನ್ ಬೇಗ್ (ಪ್ರವಾಸ್ಯೋದ್ಯಮ ಹಾಗೂ ವಕ್ಫ್ ಸಚಿವರು) :—

ಅ) ಹೌದು

ಆ) ಐ.ಐಲ್ ಮತ್ತು ಎಫ್.ಎಸ್. ಸಂಸ್ಥೆ ಮಧ್ಯಕಾಲಿಕ ವರದಿಯನ್ನು ಸಲ್ಲಿಸಿದ್ದು ಇದನ್ನು ಕೇಂದ್ರ ಸರ್ಕಾರಕ್ಕೆ ಅನುಮೋದನೆ ಹಾಗೂ ಮುಂದಿನ ಕಂತುಗಳನ್ನು ಬಿಡುಗಡೆ ಮಾಡಲು ಸಲ್ಲಿಸಲಾಗಿದೆ.

ಕೇಂದ್ರದಿಂದ ರಾಜ್ಯ ಪ್ರವಾಸ್ಯೋದ್ಯಮಕ್ಕೆ ಬಂದ ಹಣ.

2230 (2727) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) : — ಮಾನ್ಯ ಪ್ರವಾಸ್ಯೋದ್ಯಮ ಹಾಗೂ ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕಳೆದ ಮೂರು ವರ್ಷಗಳಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯ ಪ್ರವಾಸ್ಯೋದ್ಯಮ ಅಭಿವೃದ್ಧಿಗೆ ಬಂದ ಹಣವೆಷ್ಟು?

ಆ) ಆ ಹಣವನ್ನು ಯಾವ ಯಾವ ಪ್ರವಾಸ್ಯೋದ್ಯಮ ಅಭಿವೃದ್ಧಿಗಾಗಿ ಖರ್ಚು ಮಾಡಲಾಗಿದೆ.

ಇ) ಕಳೆದ ಸಾಲಿನಲ್ಲಿ ರಾಜ್ಯ ಪ್ರವಾಸ್ಯೋದ್ಯಮ ಅಭಿವೃದ್ಧಿಗಾಗಿ ರಾಜ್ಯ ಸರ್ಕಾರ ಕೇಂದ್ರಕ್ಕೆ ಸಲ್ಲಿಸಿರುವ ಪ್ರಸ್ತಾವನೆಗಳು ಯಾವುವು?

ಶ್ರೀ ಆರ್. ರೋಷನ್ ಬೇಗ್ (ಪ್ರವಾಸ್ಯೋದ್ಯಮ ಹಾಗೂ ವಕ್ಫ್ ಸಚಿವರು) :—

ಅ) ಭಾರತ ಸರ್ಕಾರದಿಂದ ಕಳೆದ 3 ವರ್ಷಗಳಲ್ಲಿ ವಿವಿದ ಪ್ರವಾಸ್ಯೋದ್ಯಮ ಮೂಲಭೂತ ಸೌಲಭ್ಯಗಳ ಯೋಜನೆಗಳಿಗೆ ಬಿಡುಗಡೆ ಮಾಡಿರುವ ಮೊತ್ತದ ವಿವರ ಈ ಕೆಳಕಂಡಂತಿವೆ.

ಕ್ರ. ಸಂ.	ವರ್ಷ ಮತ್ತು ಯೋಜನೆಗಳ ಸಂಖ್ಯೆ	ಬಿಡುಗಡೆ ಮಾಡಿರುವ ಕೇಂದ್ರದ ಪಾಲು (ರೂ. ಲಕ್ಷಗಳಲ್ಲಿ)
1.	1998-1999(13)	178.25
2.	1999-2000(42)	318.93
3.	2000-2001(19)	147.37

ಆ) ಯೋಜನೆಗಳ ವಿವರಗಳನ್ನು ಲಗತ್ತಿಸಿದೆ.

ಇ) ಯೋಜನೆಗಳ ಪಟ್ಟಿಯನ್ನು ಲಗತ್ತಿಸಲಾಗಿದೆ.